ಪ್ರಸ್ತುತ ಆ ಕೇಂದ್ರವು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಆರೋಗ್ಯ ಸೇವೆ ಒದಗಿಸುತ್ತಿದ್ದು, ಇಬ್ಬರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ಅವಶ್ಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸದರಿ ಕಟ್ಟಡ ಕಾಮಗಾರಿಯನ್ನು ಆದಷ್ಟು ಜಾಗ್ರತೆಯಾಗಿ ಪೂರ್ಣಗೊಳಿಸಿ, ಸಮುದಾಯ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಆರೋಗ್ಯ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ : ಧನ್ಯವಾದಗಳು.

6. **ವಿಷಯ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಿಕ್ಷಕರನ್ನು ವಿವಿಧ ತರಬೇತಿಗಳಿಗೆ ನಿಯೋಜಿಸುತ್ತಿರುವುದರಿಂದ ಶಾಲೆಗಳಲ್ಲಿ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ.**

ಶ್ರೀ ದಿನಕರ ಕೇಶವ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಿಕ್ಷಕರನ್ನು ವಿವಿಧ ತರಬೇತಿಗಳಿಗೆ ನಿಯೋಜಿಸುತ್ತಿರುವುದರಿಂದ ಶಾಲೆಗಳಲ್ಲಿ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಇಲ್ಲ. ಹೇಗಿದ್ದರೂ ನಾಳೆ ಮೀಟಿಂಗ್ ಕರೆದಿದ್ದಾರೆ, ಅಲ್ಲಿ ಕೇಳಿ. ಶ್ರೀ ತನ್ವೀರ್ ಸೇಠ್ ಹಾಗೂ ಶ್ರೀ ಖಮರುಲ್ಲಾ ಇಸ್ಲಾಂರವರು ಗಮನ ಸೆಳೆಯುವ ಪ್ರಶ್ನೆ ಕೇಳುವುದು.

7. **ವಿಷಯ : ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಇತ್ತೀಚೆಗೆ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳ ಭರ್ತಿ ಸಮಯದಲ್ಲಿ ಅಭ್ಯರ್ಥಿಗಳಿಂದ ಸಲ್ಲಿಕೆಯಾಗಿದ್ದ ಅನುಭವ ಪ್ರಮಾಣ ಪತ್ರಗಳಲ್ಲಿ ಸಾಕಷ್ಟು ನಕಲಿ ಎಂದು ಗೊತ್ತಿದ್ದರೂ ಸಹ ಇಲಾಖಾ ಪರಿಶೀಲನಾಧಿಕಾರಿಗಳು ಅವುಗಳನ್ನು ಅಂಗೀಕರಿಸಿ ಅರ್ಹ ಅಭ್ಯರ್ಥಿಗಳನ್ನು ಉದ್ಯೋಗದಿಂದ ವಂಚಿಸಿರುವ ಬಗ್ಗೆ.**

ಶ್ರೀ ತನ್ವೀರ್ ಸೇಠ್(ನರಸಿಂಹರಾಜ) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕಾರ್ಮಿಕ ಇಲಾಖೆಯಲ್ಲಿ ಕಿರಿಯ ತರಬೇತಿ ಅಧಿಕಾರಿಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಸುಳ್ಳು ಪ್ರಮಾಣ ಪತ್ರಗಳನ್ನು ಕೊಟ್ಟಿರುವಂತಹ ವಿಚಾರ ಸರ್ಕಾರಕ್ಕೆ ನಾವು ಅನೇಕ ಸಂದರ್ಭಗಳಲ್ಲಿ ಪ್ರಶ್ನೆಗಳ ಮೂಲಕವೂ ಕೇಳಿದ್ದೇವೆ. RTI ನಲ್ಲೂ ಕೇಳಿದ್ದೇವೆ. ಆದರೆ ಸರ್ಕಾರ ಒದಗಿಸಿರುವಂತಹ ಉತ್ತರ ಯಾವುದೂ ಸಮರ್ಪಕಾಗಿಲ್ಲ. ಆ ವಿಚಾರದಲ್ಲಿ ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಲೋಕಸೇವಾ ಆಯೋಗವು 2009ರ ಆಗಸ್ಟ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ 426 ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಕಳುಹಿಸಿದ್ದು, ಅದರಲ್ಲಿ 402 ಕಿರಿಯ ತರಬೇತಿ ಅಧಿಕಾರಿಗಳ ವರದಿ ಮಾಡಿಕೊಂಡಿರುತ್ತಾರೆ. ನೇಮಕಾತಿ ಪೂರ್ವದಲ್ಲಿ ಅಧಿಕೃತವಾಗಿ ಯಾರನ್ನು ಪರಿಶೀಲನಾಧಿಕಾರಿ ಎಂದು ನೇಮಕ ಮಾಡಿರುವುದಿಲ್ಲ. ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ಅಭ್ಯರ್ಥಿಗಳು ಸಲ್ಲಿಸಿದ ಮೂಲ ಅನುಭವ ಪ್ರಮಾಣ ಪತ್ರಗಳನ್ನು ಅರ್ಜಿಗಳ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರಗಳ ಪ್ರತಿಗಳ ಜೊತೆ ಹೋಲಿಕೆ ಮಾಡುವ ಕೆಲಸ ಮಾತ್ರ ಮಾಡಿಸಲಾಗಿದೆ. ತದನಂತರ ಹಲವಾರು ಅಭ್ಯರ್ಥಿಗಳ ಅನುಭವ ಪ್ರಮಾಣ ಪತ್ರಗಳು ನಕಲಿಯಾಗಿರುತ್ತವೆ ಎನ್ನುವುದಾಗಿ ದೂರು ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಸಂಬಂಧಿತ ಜಿಲ್ಲಾಧಿಕಾರಿಗಳನ್ನು ಮತ್ತು ಸಂಬಂಧಿತ ಸರ್ಕಾರಿ ಐಟಿಐಗಳ ಪ್ರಾಚಾರ್ಯರನ್ನು ಕೋರಲಾಗಿದೆ. ಇದವರೆವಿಗೆ 330 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪರಿಶೀಲನಾ ವರದಿಗಳು ಬಂದಿದ್ದು, ಅದರಲ್ಲಿ ಸದ್ಯಕ್ಕೆ 37 ಜನರ ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ವರದಿಯಾಗಿರುತ್ತದೆ. ಇದರಲ್ಲಿ 10 ಅಭ್ಯರ್ಥಿಗಳಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಲಾಗಿದೆ, ಉಳಿದವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗುವುದು. ಪರಿಶೀಲನಾ ಕಾರ್ಯ ಸಂಪೂರ್ಣಗೊಂಡ ನಂತರ ತಪ್ಪಿತಸ್ತರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ಸದಸ್ಯರು ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ, ನಮ್ಮ ಇಲಾಖೆಯಲ್ಲಿ ಕರ್ನಾಟಕ ಲೋಕ

ಸೇವಾ ಆಯೋಗವು 2009ರ ಆಗಸ್ಟ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ 426 ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಕಳುಹಿಸಿದ್ದು, ಅದರಲ್ಲಿ 402 ಕಿರಿಯ ತರಬೇತಿ ಅಧಿಕಾರಿಗಳು ವರದಿ ಮಾಡಿಕೊಂಡಿರುತ್ತಾರೆ. ನೇಮಕಾತಿ ಪೂರ್ವದಲ್ಲಿ ಅಧಿಕೃತವಾಗಿ ಯಾರನ್ನೂ ಪರಿಶೀಲನಾಧಿಕಾರಿ ಎಂದು ನೇಮಕ ಮಾಡಿರುವುದಿಲ್ಲ.. .

ಅಧ್ಯಕ್ಷರು : ಈಗ ಅದನ್ನು ಓದುವುದು ಬೇಡ. Clarification ಕೇಳಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸಚಿವರು ಅಧಿಕಾರಿಗಳು ಕೊಟ್ಟಿರುವಂತಹ ಉತ್ತರವನ್ನು ಇಲ್ಲಿ ಓದಿತ್ತಿದ್ದಾರೆ. ಬಹುಶಃ ಸರ್ಕಾರಕ್ಕೆ ಈ ಸದನದಲ್ಲಿ ಕೊಡುವಂತಹ ಉತ್ತರ ಒಂದು ರೀತಿಯ assurance ರೀತಿ ಆಗುತ್ತದೆ ಅಥವಾ privilege motion move ಮಾಡುವ ಅಧಿಕಾರವೂ ಸದಸ್ಯರಿಗೆ ಇರುತ್ತದೆ ಎನ್ನುವುದು ಮಾನ್ಯ ಸಚಿವರ ಗಮನದಲ್ಲಿರಬಹುದು ಎಂದು ನಾನು ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನನಗೆ ಸರ್ಕಾರ 7ನೇ ಮಾರ್ಚ್ 2011ರಲ್ಲಿ ಕೊಟ್ಟಿರುವಂತಹ ಉತ್ತರದಲ್ಲಿ ನಮ್ಮಲ್ಲಿ ಪೂರ್ವಯೋಜಿತ ವಾದಂತಹ ಅಧಿಕಾರಿಗಳನ್ನು ನೇಮಕ ಮಾಡದೇ ಇರುವ ಪ್ರಕ್ರಿಯೆ ಇತ್ತು. ಹಾಗಾಗಿ ಕೆಪಿಎಸ್‌ಸಿ ಮತ್ತು ಅವರ ಇಲಾಖೆಗೆ ಸೇರಿದಂತಹ Factories ಮತ್ತು Boilers ಅಧಿಕಾರಿಗಳು ಅಲ್ಲಿ ಹೋಗಿ ಪರಿಶೀಲನೆ ಮಾಡಿದ್ದಾರೆ ಎನ್ನುವಂತಹ ವಿಚಾರವನ್ನು ನಮಗೆ ಉತ್ತರದಲ್ಲಿ ಕೊಟ್ಟಿದ್ದಾರೆ. ಮೊನ್ನೆ ದಿನ 5ನೇ ತಾರೀಖಿನ ದಿನದಂದು ಕೊಟ್ಟಿರುವಂತಹ ಉತ್ತರದಲ್ಲಿ ನಮ್ಮಲ್ಲಿ ಕೇವಲ 10 ಜನ ಮಾತ್ರ ಸುಳ್ಳು ಪ್ರಮಾಣಪತ್ರವನ್ನು ಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಕೊಟ್ಟಿದ್ದಾರೆ. ಈ ಪ್ರಕ್ರಿಯೆಯು 2009ರಲ್ಲಿ ಪ್ರಾರಂಭವಾಗಿರುವಂತಹ ಸಂದರ್ಭದಲ್ಲಿ ನಾನು RTI ನಲ್ಲಿ ಸಂಪೂರ್ಣ ವಾದಂತಹ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನಾನೇ 126 ಜನ ಸುಳ್ಳು ಪ್ರಮಾಣಪತ್ರ ಕೊಟ್ಟಿರುವಂತಹ ದಾಖಲೆಯನ್ನು ಇಲಾಖೆಗೆ ಮತ್ತು ಸಚಿವರಿಗೆ ಕಳುಹಿಸಿಕೊಟ್ಟಿದ್ದೇನೆ. ಇಲ್ಲಿ ಅಧಿಕಾರಿಗಳಿಗೆ ರಕ್ಷಣೆ ಮಾಡುವಂತಹ ಸಲುವಾಗಿ ಸದನದಲ್ಲಿ ಮಾನ್ಯ ಸಚಿವರು ತಪ್ಪು ಉತ್ತರವನ್ನು ಕೊಡುತ್ತಿದ್ದಾರೆ. ಬಹುಶಃ ಚರ್ಚೆಗೆ ನಾನು ಹೆಚ್ಚಿಗೆ ಆಸ್ಪದವನ್ನು ಕೊಡುವುದಿಲ್ಲ. ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಬೇಕು. ನಾನು ಎಲ್ಲಾ ದಾಖಲಾತಿಗಳನ್ನು ತಮಗೆ ಒದಗಿಸುತ್ತೇನೆ. ಇಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನು ಕ್ರಮ

ತೆಗೆದುಕೊಳ್ಳುತ್ತಾರೆ, ನಾನು ಅಧಿಕಾರಿಗಳ ಹೆಸರನ್ನು ಇಲ್ಲಿ ಹೇಳುವುದು ಬೇಡ. ಯಾವ ಯಾವ ಘಟನೆಗಳು ಯಾವಾಗ ನಡೆದಿದೆ ಎಂದು ಹೇಳುತ್ತೇನೆ. ಸನ್ಮಾನ್ಯ ಖಮುರುಲ್ ಇಸ್ಲಾಂರವರು ಈ ರಾಜ್ಯದ ಮಾಜಿ ಸಚಿವರಾಗಿದ್ದವರು ಹಾಗೂ ಈ ಇಲಾಖೆಯನ್ನು ನಿರ್ವಹಿಸಿದವರಾಗಿದ್ದಾರೆ. ನಾನು ಸಹ ಈ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸಿದವನಾಗಿದ್ದೇನೆ. 17ನೇ ಏಪ್ರಿಲ್ 2011ರಲ್ಲಿ ಇಂತಹ ವಿಚಾರ ನನ್ನ ಗಮನಕ್ಕೆ ಬಂದಿದೆ. ಕೆಪಿಎಸ್‌ಸಿ ಯಲ್ಲಿ ಯಾವುದೇ ಒಂದು ರೀತಿಯಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಕೊಡುವಂತಹ ಪ್ರಕ್ರಿಯೆಗೆ ಆಸ್ಪದ ಕೊಡುತ್ತಿರುವುದರಿಂದ ನಿಮ್ಮ ಇಲಾಖೆಯಲ್ಲಿ ಮುಂಜಾಗ್ರತೆ ಯಿಂದ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು 4ನೇ ಜೂನ್ 2011 ರಂದು ಇದರ ಬಗ್ಗೆ ಒಂದು ಆದೇಶವನ್ನು ಮಾಡುತ್ತಾರೆ.

ಅಧ್ಯಕ್ಷರು : ಮಾನ್ಯ ತನ್ವೀರ್ ಸೇಠ್‌ರವರೆ, ತಾವು clarification ಅನ್ನು ಕೇಳಿ.

ಶ್ರೀ ತನ್ವೀರ್ ಸೇಠ್ : ಯಾವುದೇ ರೀತಿಯಲ್ಲಿ ಇದನ್ನು ಕಡೆಗಣಿಸಿ ಕೆಲವೊಂದು ಅಧಿಕಾರಿಗಳು.....

ಅಧ್ಯಕ್ಷರು : ಅಧಿಕಾರಿಗಳು ಕೊಟ್ಟಿರುವಂತಹ ಉತ್ತರದ ಬಗ್ಗೆ ಏನು clarification ಇದೆ, ಅದನ್ನು ಕೇಳಿ.

ಶ್ರೀ ತನ್ವೀರ್ ಸೇಠ್ : ಅದಕ್ಕಾಗಿ ನಾನು ನೇರವಾಗಿ ಹೇಳುತ್ತಿದ್ದೇನೆ. ತಾವು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಬೇಕು. ನಾನು ಎಲ್ಲಾ ಮಾಹಿತಿಯನ್ನು ತಮಗೆ ಕೊಡುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಏನು ಉತ್ತರವನ್ನು ಕೊಡುತ್ತಾರೋ ಕೊಡಲಿ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೆ, The KPSC has selected 403 candidates and then posting orders have been given by the department. Before giving the posting, I came to know that there are fake certificates. I have written a letter to the Commissioner stating that there are certain fake certificates and to verify them. They have been verified. I will give the dates that they have called all the selected candidates to the Head Office. They have verified and then the postings were given. I had a question in writing, they have said that there is no verification, no Verification Officer was appointed, whereas

the Additional Director (Administration) has been appointed and then the file has gone to the Secretary, to the Commissioner and to the Hon'ble Minister, he has written as 'ಚರ್ಚಿಸಿ'. Thereafter, before giving that, the Hon'ble Minister has also seen it. It is not a question of one or two. Under the RTI, I have collected the information. Now they are saying that 10 fake certificates are there, without verification. .

Mr. Speaker : What is the clarification you require?

ಶ್ರೀ ಖಮರುಲ್ ಇಸ್ಲಾಂ : This is the verification sent to the department.

Mr. Speaker : What is the clarification please? This is only Calling Attention. It is not a discussion. No, No, I will not allow.

ಶ್ರೀ ಖಮರುಲ್ ಇಸ್ಲಾಂ : I fully charge the Hon'ble Minister.

Mr. Speaker : No, No.

ಶ್ರೀ ಖಮರುಲ್ ಇಸ್ಲಾಂ : Let him say.

ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು) : ತಾವು ಏನೇನೋ ಮಾತನಾಡಬೇಡಿ ಕುಳಿತುಕೊಳ್ಳಿ. Don't talk like that.

ಅಧ್ಯಕ್ಷರು : No, No.. .

ಶ್ರೀ ಬಿ.ಎನ್. ಬಚ್ಚೇಗೌಡ : How did you charge against me? No, no sit down.

ಶ್ರೀ ಖಮರುಲ್ ಇಸ್ಲಾಂ : I am charging.

ಶ್ರೀ ಬಿ.ಎನ್. ಬಚ್ಚೇಗೌಡ : No, No. Sit down. Don't talk like that. You were earlier a Minister. Ex-Minister ಆಗಿದ್ದು ತಾವು ಈ ರೀತಿಯಾಗಿ ಮಾತನಾಡುತ್ತಿದ್ದೀರಿ without knowing facts.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. I will not allow.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಬೆಳಿಗ್ಗೆಯಿಂದ ಸದನವು ಚೆನ್ನಾಗಿ ನಡೆದುಕೊಂಡು ಬರುತ್ತಿದೆ. It is not the proper way.

(ಗೊಂದಲ)

ಅಧ್ಯಕ್ಷರು : No No, I will not allow.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಅವರು calling attention ಕೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೆ, ತಾವು ಉತ್ತರವನ್ನು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಹೇಳುವುದನ್ನು ಅವರು ಕೇಳಬೇಕಲ್ಲ? I will answer to your question. ಈ ದೂರು ಬಂದ ತಕ್ಷಣ ನಾನು ವಿಚಾರಣೆಯ ಬಗ್ಗೆ ಆದೇಶವನ್ನು ಮಾಡಿದ್ದೇನೆ. ಇದರಲ್ಲಿ JTOs 402 ಜನರು ನಮ್ಮಲ್ಲಿ ರಿಪೋರ್ಟ್ ಮಾಡಿಕೊಂಡರು. 300 ಅಭ್ಯರ್ಥಿಗಳ ಪರಿಶೀಲನಾ ವರದಿಗಳು ಬಂದಿದ್ದು, ಇವುಗಳಲ್ಲಿ 37 ನಕಲಿ ಎಂದು ಮೇಲ್ನೋಟಕ್ಕೆ ನಮಗೆ ಗೊತ್ತಾಗಿದೆ Out of 402 ನಲ್ಲಿ. ಇದರಲ್ಲಿ ಸೆಲೆಕ್ಟ್ ಆದಾಗ ಏನಾಯಿತೆಂದರೆ, ಇಲ್ಲಿ ಆಯ್ಕೆ ವಿಧಾನ ಇರುವುದು ಕೆಪಿಎಸ್ ಸಿಯಲ್ಲಿ, ಅಲ್ಲಿಂದ ಬಂದು ನಾವು ಇಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವಾಗ Assistant Director (establishment) ರವರು ಪರಿಶೀಲನೆಯನ್ನು ಮಾಡುತ್ತಾರೆ. ಅವರ ಸಿಂಧುತ್ವ, ಜಾತಿ ಮತ್ತು ಇತರ ವಿಷಯಗಳನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಳ್ಳುತ್ತೇವೆ. ಅದಾದ ನಂತರ Police verification ಮಾಡುವುದನ್ನು ಸಹ ನಾವು ಮಾಡುತ್ತೇವೆ. ಈಗ ಇಬ್ಬರು ಮಾಜಿ ಸಚಿವರುಗಳು ಹಾಗೂ ಮಾನ್ಯ ಸದಸ್ಯರು ಈಗ ಹಾಲಿ ಕೇಳಿರುವುದು. ಅವರ ಅನುಭವ ಪತ್ರ ಎಂದರೆ experience certificate ಇಲಾಖೆಗೆ ಏನು ಕೊಟ್ಟಿದ್ದರು, ಅವರು ಅದನ್ನು verify ಮಾಡಿರುವುದಿಲ್ಲ. ಇದು ತಪ್ಪು ಎಂದು ಅವರಿಬ್ಬರು ನನಗೆ ಹೇಳಿದ್ದರು. ಅವರು ಹೇಳಿದ ಮೇಲೆ ಅದನ್ನು ವರಿಫೈ ಮಾಡಬೇಕೆಂದು, ನಾವು ಕ್ರಮ ಜರುಗಿಸಬೇಕೆಂದು ಹೇಳಿದ ಮೇಲೆ ಈ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಂಡು ಯಾರು ಅಧಿಕಾರಿ ಮತ್ತು ನೌಕರರು

ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿ ಬಗ್ಗೆ ತನಿಖೆಯನ್ನು ಆದೇಶಿಸಿ ತನಿಖಾ ವರದಿಯು ಬಂದ ನಂತರ ತಪ್ಪಿತಸ್ಥ ನೌಕರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಅವರು experience ಇಲ್ಲದವರನ್ನು ತೆಗೆದುಕೊಂಡಿದ್ದಾರೆ ತಾವು ಏನು fake ಎಂದು ಹೇಳಿದ್ದೀರಿ, ಇದರ ಬಗ್ಗೆ ನಾನು ಹೇಳುತ್ತೇನೆ. ಇದರಲ್ಲಿ ಅನುಭವ ಪ್ರಮಾಣ ಪತ್ರಗಳು ನಕಲಿಯಾಗಿರುತ್ತದೆ. ಈ ರೀತಿಯಾದ ದೂರು ಬಂದ ಹಿನ್ನೆಲೆಯಲ್ಲಿ ಈಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವಂತೆ ಜಿಲ್ಲಾಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಸರ್ಕಾರಿ ಐಟಿಐಗಳ ಪ್ರಚಾರ್ಯರನ್ನು ಕೋರಲಾಗಿದೆ. ಇದುವರೆಗೂ 330 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪರಿಶೀಲನಾ ವರದಿಯೂ ಬಂದಿದ್ದು ಅದರಲ್ಲಿ ಸದ್ಯಕ್ಕೆ 37 ಜನರು prima-facie ಜನರ ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ವರದಿಯಾಗಿದೆ. ಇದರಲ್ಲಿ 10 ಜನ ಅಭ್ಯರ್ಥಿಗಳಿಗೆ ಕಾರಣ ಕೇಳಿ ನೋಟೀಸ್‌ಅನ್ನು ಹಾಲಿ ಜಾರಿ ಮಾಡಲಾಗಿದೆ. ಉಳಿದವರಿಗೆ ಕಾರಣ ಕೇಳಿರುವ ನೋಟೀಸ್ ಅನ್ನು ಜಾರಿ ಮಾಡಲಾಗುವುದು. ಪರಿಶೀಲನಾ ಕಾರ್ಯವು ಪೂರ್ಣಗೊಂಡ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಇದು clarification ಆಗಿದೆ. How can you ask? No, No, it is closed. ನೀವು ಗಮನ ಸೆಳೆಯುವುದನ್ನು ಕೇಳಿದ್ದೀರಿ. ಇಲ್ಲಿ ಚರ್ಚೆಗೆ ಅಕಾಶವಿಲ್ಲ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೆ, why verification has not been done before issuing the orders?

ಅಧ್ಯಕ್ಷರು : No. No, under rule 73. This is only a clarification.

ಶ್ರೀ ತನ್ವೀರ್ ಸೇಠ್ : ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ಬೇರೆ ರೀತಿಯಲ್ಲಿ ತನ್ನಿ. ಇದು ಉತ್ತರವಲ್ಲ. This is only a clarification. I will close it.

ಶ್ರೀ ಖಮರುಲ್ ಇಸ್ಲಾಂ : ನಾನು ಈ ಬಗ್ಗೆ ಏನು ಮಾತನಾಡಿದ್ದೇನೆ.

ಅಧ್ಯಕ್ಷರು : ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರ ಗಮನಸೆಳೆಯುವ ಸೂಚನೆ ಇದ್ದು ಅವರ ಸದನದಲ್ಲಿ ಇಲ್ಲ. ಮಾನ್ಯ ರಮಾನಾಥ ರೈರವರೆ, ತಾವು ಗಮನಸೆಳೆಯುವ ಸೂಚನೆಯನ್ನು ಕೇಳಿ.

ಶ್ರೀ ತನ್ವೀರ್ ಸೇಠ್ : ಸದನದಲ್ಲಿ ತಪ್ಪು ಮಾಹಿತಿ ಕೊಡುವುದು ಬೇಡ. ಇಲ್ಲಾ ಸಚಿವರು ಅದಕ್ಕೆ ನೇರವಾಗಿ ಕುಳಿತುಕೊಂಡು ಮಾತನಾಡಿ ಅದರ ಬಗ್ಗೆ ಹೇಳಲಿ.

ಅಧ್ಯಕ್ಷರು : ಆಯಿತು. ಅವರು ಕರೆಸಿ ಮಾತನಾಡಲಿ.

ಶ್ರೀ ಅಪ್ಪಚ್ಚುರಂಜನ್ : ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ಹೇಳುವುದು ಕೂಡದು. ಸತ್ಯಕ್ಕೆ ದೂರವಾದುದು ಎಂದು ಬೇಕಾದರೆ ಹೇಳಬಹುದು. ತಪ್ಪು ಮಾಹಿತಿ ಎಂದು ಬಳಸಿರುವ ಪದವನ್ನು ಕಡತದಿಂದ ತೆಗೆಸಿಹಾಕಬೇಕು.

ಶ್ರೀ ಖಮರುಲ್ ಇಸ್ಲಾಂ : The whole case should be given COD or the Lokayukta.

ಶ್ರೀ ಬಿ.ಎನ್.ಬಚ್ಚೇಗೌಡ : ಅದು ಸರಿಯಾಗಿದೆ.

ಅಧ್ಯಕ್ಷರು : ಈಗ ತಪ್ಪು ಮಾಹಿತಿಯನ್ನು ಕೊಟ್ಟರೆ they are responsible.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ತಪ್ಪು ಎಂದು ಹೇಳಬಾರದು, ಸತ್ಯಕ್ಕೆ ದೂರವಾದುದು ಎಂದು ಹೇಳಬಹುದು.

ಅಧ್ಯಕ್ಷರು : ತಪ್ಪು ಎಂದು ಗೊತ್ತಾದರೆ we take action against them.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಸಭಾಧ್ಯಕ್ಷರೆ, ತಾವು ಲೋಕಾಯುಕ್ತ ಅಥವಾ ಸಿಓಡಿಗೆ ಕೊಡಬೇಕು.

ಅಧ್ಯಕ್ಷರು : ಹಾಕಿ, You are at liberty.

(ಗೊಂದಲ)

ಅಧ್ಯಕ್ಷರು : ಮಾನ್ಯ ರಮಾನಾಥ ರೈರವರೆ ತಾವು ಗಮನ ಸೆಳೆಯುವುದನ್ನು ಕೇಳಿ.

ಶ್ರೀ ಬಿ. ರಮಾನಾಥ ರೈ : ಸನ್ಮಾನ್ಯ ಅಧ್ಯಕ್ಷರೆ, ...

ಶ್ರೀ ತನ್ವೀರ್ ಸೇಠ್ : ಹಿಂದೆ ಕೊಟ್ಟಿರುವಂತಹ ಉತ್ತರಕ್ಕೂ ಇವತ್ತಿನ ಉತ್ತರಕ್ಕೂ ಬಹಳ ವ್ಯತ್ಯಾಸ ಇದೆ.

ಅಧ್ಯಕ್ಷರು : ಆಯಿತು, ನಾನು ಕೇಳದೆ ಇರುವುದನ್ನು ಮುಂದೆ ಕೇಳುತ್ತೇನೆ. No, it is only a Calling Attention.

ಶ್ರೀ ಖಮರುಲ್ ಇಸ್ಲಾಂ : ನಾನು ಒಂದು ನಿಮಿಷ ಕೇಳುತ್ತೇನೆ.

ಅಧ್ಯಕ್ಷರು : No, No. I will ask him to sit.

ಅಧ್ಯಕ್ಷರು : O.K. ಮಾನ್ಯ ರಮಾನಾಥ್ ರೈರವರೆ, ತಾವು ಗಮನ ಸೆಳೆಯಿರಿ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಖಮರುಲ್ ಇಸ್ಲಾಂ ಮತ್ತು ಶ್ರೀ ತನ್ವೀರ್ ಸೇಠ್ ರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : You are a senior Member, please co-operate.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಇನ್ನೂ ಅನುಮಾನ ಬರುವಂತಹದ್ದು ಇದೆ. 37 ಜನರ ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ವರದಿಯಾಗಿದೆ. ಅದರಲ್ಲಿ 10 ಜನರಿಗೆ ಮಾತ್ರ ನೀವು ನೋಟೀಸ್ ಅನ್ನು ಕೊಟ್ಟಿದ್ದೀರಿ. Why not 37, 37 ಜನರು ಎಂದು ಹೇಳಿದ ಮೇಲೆ 10 ಜನರಿಗೆ ಮಾತ್ರ ನೋಟಿಸ್ ಕೊಟ್ಟಿದ್ದೀರಿ. ಬೇರೆಯವರಿಗೆ ಏತಕ್ಕಾಗಿ ಕೊಟ್ಟಿರುವುದಿಲ್ಲ?

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಸರ್, ತಮಗೆ ಗೊತ್ತಾಗುತ್ತದೆ, ಅದರಲ್ಲಿ ಏನಾಗಿದೆ ಎಂದರೆ 402 ಜನರಲ್ಲಿ ಇದ್ದಂಥದ್ದು ನಾವು ಅವರ ಜಾತಿ ಸಿಂಧುತ್ವ ಪ್ರಮಾಣಪತ್ರ ತರಿಸಿಕೊಳ್ಳುತ್ತೇವೆ. ನಾನು ತಮಗೆ ಹೇಳುತ್ತೇನೆ. ಅದು ಪೊಲೀಸ್ verifivation ಆಗಿ ಬಂದಿದೆ. ಅದರಲ್ಲಿ experience certificate ಕೇಳಿ ಅದರಲ್ಲಿ ಒಂದು ವರ್ಷ ಯಾವುದಾದರೂ ಕೈಗಾರಿಕೆ ಸಂಸ್ಥೆಯಲ್ಲಿ ಕೆಲಸ ಮಾಡಿರಬೇಕು. ಆ ಒಂದು ಅನುಭವ ಪ್ರಮಾಣಪತ್ರವನ್ನು ಲಗತ್ತಿಸಿ ಕೊಟ್ಟಿರುತ್ತಾರೆ. ಆ ಪ್ರಮಾಣಪತ್ರಗಳು fake Certificates ಇರಬಹುದು ಎಂದು verification ಮಾಡಿ ಎಂದು ಹೇಳಿದ್ದಾರೆ. ಅದಾದ ಮೇಲೆ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಪ್ರಾಂಶುಪಾಲರಿಂದ ಇವರು ಈ ರೀತಿ ಮಾಡಿದ್ದಾರೆಯೇ ಇಲ್ಲವೇ ಎಂದು

ಇಷ್ಟು ಜನರ ಬಗ್ಗೆಯೂ ವರದಿ ತರಿಸಿಕೊಳ್ಳುತ್ತಿದ್ದೇವೆ. ಈಗ 37 ಜನರ ವರದಿ ಬಂದಿದೆ. ಅದರಲ್ಲಿ 10 ಜನರ ಮೇಲೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದೇವೆ. 30 ಜನರ ಮೇಲೆ prima facie ಇದೆ. ಬಾಕಿ ಉಳಿದವು ಬರಬೇಕಾಗಿದೆ. ಈಗ ಅವರಿಗೆ probationary period ನಾವು declare ಮಾಡಿಲ್ಲ. ವರದಿ ಬಂದ ಕೂಡಲೇ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. This is the position. ತಾವು ಅಡ್ವೋಕೇಟ್, ತಮಗೆ ಗೊತ್ತಾಗುತ್ತದೆ. ನಮ್ಮಲ್ಲಿರುವಂಥ establishment Assistant Director ಹತ್ತಿರ ಹೋಗಿ ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಆ ನಂತರ ಆ Assistant Director will verify these things. ಇದು ನಮ್ಮಲ್ಲಿ ಆಗುವ procedure.

ಶ್ರೀ ಟಿ.ಬಿ. ಜಯಚಂದ್ರ : ಎಷ್ಟು ಕಾಲಮಿತಿಯಲ್ಲಿ ಮಾಡುತ್ತೀರಿ ಎಂದು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪನಾಯಕರಿಗೆ ಹೇಳುತ್ತೇನೆ. ಈಗ ಅವರು ಸಮಿತಿ ರಚನೆ ಮಾಡಿ ಎಂದು ಮಾನ್ಯ ಸಭಾಧ್ಯಕ್ಷರನ್ನು ಕೇಳಿದ್ದಾರೆ. ಈಗ ನಮ್ಮಲ್ಲಿ ಶ್ರೀ ಮಂಜುನಾಥ್ ಪ್ರಸಾದ್ ಎಂಬ Employment & Training Commissioner ಹೊಸದಾಗಿ ಬಂದಿದ್ದಾರೆ. ಅವರಿಂದ ತನಿಖೆ ಮಾಡಿಸೋಣ. ಬೇಡ, ಇನ್ನೂ ಏನಾದರೂ ತನಿಖೆ ಮಾಡಬೇಕೆಂದರೆ I am ready for COD or Lokayukta enquiry. ಅವರಿಂದ ಮಾಡಿಸೋಣ. ಸಭಾಧ್ಯಕ್ಷರೆ, ಯಾರಿಂದಲಾದರೂ ತನಿಖೆ ಮಾಡಿಸಲಿ. I am not hiding anything.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಸಚಿವರು ಈಗ ತನಿಖೆಯನ್ನು Employment Training Commissioner ರವರಿಂದ ಮಾಡಿಸುವುದಾಗಿ ಬಹಳ ಸ್ಪಷ್ಟವಾಗಿ ಸೂಚನೆ ಕೊಟ್ಟಿದ್ದಾರೆ. – If they don't believe. ಅದನ್ನು ಬೇಡವೆಂದರೆ ಬೇರೆ ಯಾವುದೇ ರೀತಿಯ ತನಿಖೆ ಮಾಡಿಸುವುದಾಗಿ ತಿಳಿಸಿದ್ದಾರೆ.

ಅಧ್ಯಕ್ಷರು : ನಿಮ್ಮ ಸ್ಥಾನಗಳಿಗೆ ಹೋಗಿ. ಇಲ್ಲಿ ನಿಂತು ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಸಚಿವರು ಬಹಳ ಸ್ಪಷ್ಟವಾಗಿ assurance ಕೊಟ್ಟಿದ್ದಾರೆ. ಗಮನ ಸೆಳೆಯುವ ಸೂಚನೆಯಲ್ಲಿ ಅವರ ಗಮನ ಸೆಳೆದು ಅವರ clarification ಗೂ ಕೂಡ ಉತ್ತರ ಕೊಟ್ಟಿದ್ದಾರೆ. ಇಲ್ಲಿಗೆ ಇದು ಮುಗಿಯಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : Do you agree for COD enquiry? COD enquiry ಮಾಡಿ. He wants to be enquired by COD?

ಅಧ್ಯಕ್ಷರು : Enquiry by whom?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಈ ಕಡೆ ಬನ್ನಿ.

ಅಧ್ಯಕ್ಷರು : ನೀವು ಈ ಕಡೆ ಬನ್ನಿ. ಅಲ್ಲೇ ನಿಂತುಕೊಂಡು ಮಾತನಾಡಿದರೆ ಹೇಗೆ? ಈ ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸಿ.

ಶ್ರೀ ಟಿ.ಬಿ. ಜಯಚಂದ್ರ : ಈ ಕಡೆ ಬನ್ನಿ.

ಅಧ್ಯಕ್ಷರು : ಆಯಿತು. ನೀವು ಈ ಕಡೆ ಬನ್ನಿ, ಅಲ್ಲೇ ನಿಂತುಕೊಂಡು ಏಕೆ ಮಾತನಾಡುತ್ತೀರಿ? ಈ ಪ್ರಕರಣವನ್ನು COD enquiry ಗೆ ಒಪ್ಪಿಸಿ. What is this, being Senior members? Please. ಆಯಿತು. COD enquiry ಗೆ ರೆಫರ್ ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಈ matter suppress ಮಾಡುವುದು ಬೇಡ. COD enquiry ಗೆ ರೆಫರ್ ಮಾಡಿ.

ಅಧ್ಯಕ್ಷರು : COD enquiry ಗೆ refer ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಆಯಿತು ಅಧ್ಯಕ್ಷರೆ, ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಆಯಿತು. He has agreed.

ಅಧ್ಯಕ್ಷರು : ಆಯಿತು. ರಮಾನಾಥ ರೈ ಮಾತನಾಡಿ.

ಶ್ರೀ ಬಿ. ರಮಾನಾಥ ರೈ : ಈ ಆರಾಧನಾ ಯೋಜನೆ ಮುಜರಾಯಿ ಇಲಾಖೆಗೆ ಬರುತ್ತದೆಯೋ ಅಥವಾ ಕಂದಾಯ ಇಲಾಖೆಗೆ ಬರುತ್ತದೆಯೋ ಗೊತ್ತಾಗುತ್ತಿಲ್ಲ. ಯಾರಿಗೆ ಬರುತ್ತದೆ. ಇದಕ್ಕೆ ನಾಳೆ ಉತ್ತರ ಕೊಡುವಿರಾ?

ಶ್ರೀ ಎಸ್. ಸುರೇಶ್ ಕುಮಾರ್ : ಉತ್ತರ ಒದಗಿಸಿದ್ದಾರೆ. Clarification ಕೇಳಿದರೆ ಅದಕ್ಕೆ ನಾಳೆ ಉತ್ತರ ಕೊಡುವುದಾಗಿ ಅವರು ಅನುಮತಿ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಬಿ. ರಮಾನಾಥ ರೈ : ಅವರು ಅನುಮತಿ ಪಡೆದುಕೊಂಡು ಹೋಗಿದ್ದಾರೆ. ನಾನು ಸಚಿವರ ಕಛೇರಿಗೆ ಹೋದಾಗ ಅವರು ಆರಾಧನ ಯೋಜನೆ ಕಂದಾಯ ಇಲಾಖೆಗೆ ಬರುತ್ತದೆ ನಮಗೆ ಬರುವುದಿಲ್ಲವೆಂದು ಹೇಳಿದ್ದರು. ಏಕೆಂದರೆ ಡಿ.ಸಿ.ಗೆ ಫಂಡ್ ಬರುವುದು. ಕಳೆದ ನಾಲ್ಕು ವರ್ಷಗಳಿಂದ ಹಣವನ್ನು ಕೊಡುತ್ತಿಲ್ಲ.

ಅಧ್ಯಕ್ಷರು : ಆಯಿತು. ರೇವಣ್ಣನವರು

8. ವಿಷಯ : ಹಾಸನ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳ ಸಮಾಜ ಕಲ್ಯಾಣ ಇಲಾಖೆಯ ಎಸ್.ಸಿ.ಪಿ ಮತ್ತು ಎಸ್.ಟಿ.ಪಿ ಕಾಮಗಾರಿಗಳ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಿದ್ದರೂ ಸಹ ಸದರಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡದಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹಾಸನ) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಹಾಸನ ಜಿಲ್ಲೆಯ ಎಸ್.ಸಿ.ಪಿ ಮತ್ತು ಎಸ್.ಟಿ.ಪಿ. ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಕೊಟ್ಟು ಸುಮಾರು ನಾಲ್ಕು ತಿಂಗಳುಗಳಾಯಿತು. ಇವತ್ತಿನವರೆಗೆ ಅದಕ್ಕೆ ಆಡಳಿತಾತ್ಮಕ ಅನುಮತಿಯನ್ನು ಕೊಟ್ಟಿಲ್ಲ. ಇವರು 25 ಲಕ್ಷ ರೂಪಾಯಿಗಳನ್ನು ಒಂದೊಂದು ಕಾಲುವೆಗೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. 25 ಲಕ್ಷ ರೂಪಾಯಿಗಳಿಗೆ ರಸ್ತೆ ಕೆಲಸ ಮಾಡಿಸಲಿಕ್ಕೆ ಸಾಧ್ಯವೇ? ಕೆಲವು ಊರುಗಳಲ್ಲಿ, ನಮ್ಮಲ್ಲಿ, 10, 15, 20, 30 ಮನೆಗಳು ಇವೆ. ನಾವು ಐದೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದಕ್ಕೆ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ನಮಗೆ ಪತ್ರ ಬರೆಯುತ್ತಾರೆ. ನಾವು ಕಂಟ್ರಾಕ್ಟ್ ಕೊಡುವ ಉದ್ದೇಶವಿಲ್ಲ. ಬೇಕಾದರೆ ಸಮಾಜಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳೇ ಕಂಟ್ರಾಕ್ಟ್ ಮಾಡಿಕೊಳ್ಳಲಿ. ನಮಗೆ ಕೆಲಸ ಮಾಡಿಕೊಡಿ. ದಯಮಾಡಿ ಅದನ್ನು ಐದೈದು ಲಕ್ಷ ರೂಪಾಯಿಗಳಿಗೆ ಕೆಲಸ ಮಾಡಿಸಿಕೊಡಿ. ಮೂರು ತಿಂಗಳಾಯಿತು.. ಇನ್ನು ಮೂರು ತಿಂಗಳುಗಳಿವೆ. ಅನುಮತಿ ಕೊಡದಿದ್ದರೆ ನಾವೇನು ಮಾಡಬೇಕು ಹೇಳಿ? ದಯಮಾಡಿ ಅನುಮತಿ ಕೊಡಿ. ಮಾನ್ಯ ಸಚಿವರು ಈಗ ಇಲ್ಲ. ಅವರು ಮಾಡಿದ್ದೇವೆಂದು ಹೇಳಿದರು.